ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಬಗ್ಗೆ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ರೆವೆನ್ಯೂ ಇಲಾಖೆಯವರು ಇದನ್ನೆಲ್ಲ ನೋಡಿ ಎಷ್ಟು ಬೆಳೆಯಾಗಿದೆ ಎನ್ನುತಕ್ಕ ವಿಚಾರದಲ್ಲಿ ಪ್ರತಿವರ್ಷ ಅಂದಾಜುಮಾಡಿ ರಿಮಿಷ್ಷ್ ಕೊಡುವುದಕ್ಕೆ ಶಿಫಾರ್ಸು ಮಾಡಿದರೆ ಅದರಂತೆ ಸರ್ಕಾರದವರು ರಿಮಿಷ್ಷ್ ಕೊಡುತ್ತಾರೆ.

Electrification work in the villages of Chamarajanagar Taluk.

Q.—2470. Sri U. M. MADAPPA (Chamarajanagar).—

Will the Government be pleased to state :—

(*a*) the number of villages in which electrification works are half completed in Chamarajanagar Taluk;

(*b*) the dates on which they were commenced;

(*c*) the reasons for the inordinate delay in completing them ?

A.—Sri H. K. VEERANNA GOWDH (Minister for Public Works).—

(*a*) One. About 40 per cent of the work remains to be done in this village.

(*b*) 2nd April 1957.

(*c*) Want of essential materials like aluminium and copper wire.

ಶ್ರೀ ಯು. ಎಂ. ಮಾದಪ್ಪ.—ಒಂದು ವರ್ಷದಿಂದ ಈ material ಸಿಕ್ಕಲಿಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆಗ material ಇರಲಿಲ್ಲ. ಆ ವಿಷಯ ಮಾನ್ಯ ಸದಸ್ಯರಿಗೂ ಗೊತ್ತಿದೆ. ಈಚೀಚೆಗೆ ಪರಿಸ್ಥಿತಿ ಉತ್ತಮವಾಗುತ್ತಿದೆ.

ಶ್ರೀ ಯು. ಎಂ. ಮಾದಪ್ಪ.—ಈ ಗ್ರಾಮಕ್ಕಾಗಿ ಎಂದು materials ಸೆಂಟ್ರಲ್ ಸ್ಟೋರಿನಿಂದ ಡ್ರಾ ಮಾಡಿ ಅನಂತರ I.P. ಸೆಟ್ಸ್‌ಗೆ ಹಾಕಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಂದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಹೀಗೆ ಮಾಡಿರಬೇಕಾಗಿದ್ದರೆ ಅದರ ಹಿಂದೆ ಏನಾದರೂ ಅರ್ಥವಿರಬೇಕು ಅಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾಡಿರಬೇಕಾಗಿದ್ದರೆ ಎನ್ನುವ ಬೇಸಿಸ್ ಮೇಲೆ ತಾವು conclusionಗೆ ಬರಬೇಕು ಎಂದರೆ ಅದು ಹೇಗೆ ಸಾಧ್ಯ? ನಾನು ಮುಂಚೆಯೇ ಈ ವಿಷಯ ಸರ್ಕಾರಕ್ಕೆ ಗೊತ್ತಿಲ್ಲವೆಂದು ಹೇಳಿದ ಮೇಲೆ ಈ ರೀತಿ ಕೇಳಿದರೆ ನಾನು ಹೇಗೆ ಒಂದು conclusionಗೆ ಬರಲಿ. ತಾವು ಮೊದಲೇ ಈ ವಿಚಾರದಲ್ಲಿ ಪ್ರಶ್ನೆಯನ್ನು ಕಳುಹಿಸಿದ್ದರೆ ವಿವರಗಳನ್ನು ತರಿಸುತ್ತಿದ್ದೆ. ತಾವು ಊಹೆಯ ಮೇಲೆ 'ಆಗಿದ್ದರೆ' ಎಂದು ಹೇಳಿ ನಿರ್ಧಾರಕ್ಕೆ ಬರಬೇಕು ಎಂದರೆ ಹೇಗೆ ಸಾಧ್ಯ?

Sri U. M. MADAPPA.—Will the Government enquire into the matter ?

Sri H. K. VEERANNA GOWDH.—I shall certainly enquire into the matter if you care to bring this matter up again. However, I will make enquiries regarding the question you have put.

Sri U. M. MADAPPA.—May I know what is the stage regarding the progress of the work ?

Sri H. K. VEERANNA GOWDH.—According to the report I have received, on 7th April 1958, forty per cent of the work is yet to be completed. So, more than half is done.

ಶ್ರೀ ಯು. ಎಂ. ಮಾದಪ್ಪ.—ತಾಮ್ರದ ತಂತಿಯನ್ನು ಈಗ ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾಮ್ರದ ತಂತಿ ಸಿಕ್ಕದೆ ಇದ್ದರೂ ಕಲ್ಕತ್ತದಿಂದ ಒಂದು ಕಂಪೆನಿಯವರು ಎರಡು ಸಾವಿರ ಮೈಲಿ ಉದ್ದದಷ್ಟು ಅಲ್ಯುಮಿನಿಯಂ ತಂತಿ ಕೊಡುವುದಕ್ಕೆ ಒಪ್ಪಿದ್ದಾರೆ ; ಬರುತ್ತಿದೆ. ಯಾವುದು ಸಾಧ್ಯವೋ ಅದನ್ನು ಕಳುಹಿಸಲು ಏರ್ಪಾಡು ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿ ಅಂದಾಜಿಗಿರತಕ್ಕ ಕೆಲಸವನ್ನು ಒಂದು ವರ್ಷದ ಹಿಂದೆಯೇ ಮುಗಿಸಿದ್ದರೆ ಬೋರ್ಡಿಗೆ ಎಷ್ಟು ಉತ್ಪತ್ತಿ ಬರುತ್ತಿತ್ತು, ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಥಾಪ್ರಕಾರ 'ರೆ' ಎಂದು ಕೇಳಿದರೆ ಏನು ಹೇಳಲಿ ? ಈಗ ಕೊಟ್ಯಾಂತರ ರೂಪಾಯಿ ಖರ್ಚುಮಾಡುವ ಕೆಲವು ಕೆಲಸಗಳನ್ನು ಹತ್ತು ವರ್ಷಗಳ ಹಿಂದೆ ತೆಗೆದು ಕೊಂಡಿದ್ದರೆ ಅರ್ಧದಷ್ಟು ಖರ್ಚು ಕಡಮೆಯಾಗುತ್ತಿತ್ತು. ನಾವು ಆ ರೀತಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Sri U. M. MADAPPA.—The negligence and the indifference on the part of the officers is also one of the causes for the loss. Is it not a fact ?

Sri H. K. VEERANNA GOWDH.—I do not admit. It is not due to the indifference on the part of the officers. It is clearly stated that it was due to the want of materials which we could not easily get. Wire and other things have got to come from abroad. Even if there is a little indifference, I cannot entirely hold them responsible.

Sri U. M. MADAPPA.—I want to know whether the Government is aware that the departmental officers have taken some other estimates which were sanctioned subsequently ?

Sri H. K. VEERANNA GOWDH.—I am not aware of it. Sometimes it so happens. Even if the estimates are prepared later than the other estimates, when the officers come ready with their reports and completion report, sometimes it so happens that the estimates prepared later are taken up first and estimates prepared earlier are taken up later on. Generally it sometimes happens. In this particular case I do not know.

Selection of Grama Sevakas and Grama Sevikas in the State.

Q.—2532. Sri MANJAPPA ULLAL (Karkal).—

Will the Government be pleased to state :—

(*a*) out of the total number of 400 Grama Sevakas selected last time, the number of candidates belonging to each taluk who have been selected for being trained as such ;

(*b*) the period of training ;

(*c*) the number of lady candidates, who have been selected for being trained as Grama Sevikas ?

A.—Sri S. NIJALINGAPPA (Chief Minister).—

(*a*) No. of candidates selected and posted to the respective Training Centres (last batch) is noted hereunder.

E.T.C., Mandya	...	108
E.T.C., Munirabad	...	37
E.T.C., Dharwar	...	124
Total	...	269*

(Talukwar details *vide* statement given below)

(*b*) Six months.

(*c*) 30 candidates (present batch).

**(The number of Grama Sevakas that was proposed to be taken for training as per advertisement was 400. But only 269 candidates with the required qualifications were available and were taken for training.)*